ಎಂ.ಎ. ಕುಮಾರ್, ಬೆಂಗಳೂರು

ತುತ್ತು ಮತ್ತು ಮುತ್ತು. ಯಾವುದು ಹೆಚ್ಚು?



ಮುತ್ತು.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ನಾನು ಮೊದಲೇ ಹೇಳಿದ್ದೆ... ನೀವು ಕೇಳಿದಿರಾ?

ಕೇಳಿದ್ದೆ. ನೀವು ಶಶಿ ತರೂರ್‌ನಂತೆ ಹೇಳಿದ್ದರಿಂದ ಅರ್ಥವಾಗಲಿಲ್ಲ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಈಗಿನ ಕ್ವಾರಂಟೈನ್‌ಗೂ ಹಿಂದಿನ ವನವಾಸಕ್ಕೂ ಏನು ವ್ಯತ್ಯಾಸ?

ವನವಾಸದಲ್ಲಿ ಸೀನಿಗೆ ಕೆಮ್ಮಿಗೆ ಮುಕ್ತ ಅವಕಾಶವಿತ್ತು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ನದಿಯಲ್ಲಿ ತೊಳೆದ ಪಾಪ ಎಲ್ಲಿ ಹೋಗುತ್ತದೆ?

ಈಜಿ ದಡ ಸೇರಿ ಮತ್ತಾರದೋ ಹೆಗಲೇರುತ್ತದೆ.

ರಾಜಶೇಖರ ಹಾದಿಮನಿ, ಧಾರವಾಡ

ಕಾಲು ಕೆದರಿ ವಿನಾ ಕಾರಣ ಜಗಳ ಮಾಡುವವರಿಗೆ ಏನು ಮಾಡಬೇಕು?



ಕಾಲು ಕೆರೆದುಕೊಳ್ಳಲಾಗದಂತಹ ದಪ್ಪನೆಯ ಸಾಕ್ಸ್ ಕೊಡಿಸಿ.

ಎನ್.ಕೆ. ಹೆಬ್ಬಾರ, ಕೋಣೆ

ನಾವು ನೀವು ನಿಮಿತ್ತ ಮಾತ್ರ. ಎಲ್ಲವೂ ನಡೆಯುವುದು ಅವನಿಚ್ಛೆಯಂತೆ. ಏನಂತೀರಿ?

ಹ್ಞ! ಅವನ ಪೂಜೆ ನಡೆಯುವುದೇ ನಮ್ಮಿಚ್ಛೆಯಂತೆ. ನಾವಿರದೆ ಅವನೂ ನಿರುದ್ಯೋಗಿ.

ಎಸ್.ಎ. ಮೋಹನರಾಜು, ಶಂಕರಘಟ್ಟ

ಸಂಪತ್ತು ಬರುವುದು ದಾನ ಮಾಡಲು; ಬಡತನ ಬರುವುದು ಧ್ಯಾನ ಮಾಡಲು; ಸರಿಯೇ?

ದಾನದಿಂದಲೇ ಕರ್ಣ ಕೆಟ್ಟ. ಸಂಪತ್ತಿಗೆ ವಿವೇಕ, ಬಡತನಕ್ಕೆ ಜಾಗರೂಕತೆಯೇ ಸೂಕ್ತ ಜೋಡಿ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಹೆಣ್ಣಿನ ಮಾತಿಗೂ, ರುಬ್ಬುವ ಒರಳಿಗೂ ಏನು ವ್ಯತ್ಯಾಸ?

ಒರಳು ಗುಂಡು ಹಾಕುವುದನ್ನು ಸ್ವಾಗತಿಸುತ್ತದೆ.

ಬಿ. ಚಂದ್ರೇಗೌಡ, ಬೆಂಗಳೂರು

ವೈಫ್‌ಗೂ, ವೈಫೈಗೂ ಏನು ವ್ಯತ್ಯಾಸ?

ವೈಫೈಯನ್ನು ಗಂಡು ಎಲ್ಲೆಡೆಯೂ ಬಯಸುತ್ತಾನೆ.

ನರಸಿಂಹ ಪೈ, ಕಾಸರಕೋಡ

ಇರುವ ಒಂದೇ ಜಗತ್ತಿಗೆ ಹಲವು ಜಗದ್ಗುರುಗಳೇಕೆ?

ಅಂತಹವರು ಗುರುಗಳಾಗುವುದು ಜಗತ್ತಿಗಲ್ಲ, ಆಯಾ ಜಾತಿಗಳ ಗತ್ತಿಗೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ಜ್ಞಾನ ಮತ್ತು ಅಹಂಕಾರ ಜೊತೆಜೊತೆಗಿದ್ದರೆ ಪರಿಣಾಮ ಏನಾಗುತ್ತದೆ?

ನಾರ್ಮಲ್ ಕಚ್ಚಾಡುವ ಸಂಸಾರ! ಎಷ್ಟೋ ಜೋಡಿಗಳದು ಇದೇ ಕಾಂಬಿನೇಷನ್.

ಹರಿತಸ, ಬೆಂಗಳೂರು

ಕನ್ನಡ ಧಾರಾವಾಹಿಯಲ್ಲಿ ರಬ್ಬರ್‌ನಂತೆ ಎಳೆಯದ ಧಾರಾವಾಹಿ ಇದೆಯೋ?

ಇವೆ; ಅವು ಚೂಯಿಂಗ್ ಗಮ್ ಮತ್ತು ಎಲಾಸ್ಟಿಕ್‌ನಂತೆ ಇವೆ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ಹಣ– ಹೆಣ ನಡುವಿನ ಅಂತರ ಎಷ್ಟು?

ಹೆಣಗಾಡುವಷ್ಟು.

ಕೃಷ್ಣ ಕೊಡಂಚ, ಬೆಂಗಳೂರು

ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ನಡುವಿನ ವ್ಯತ್ಯಾಸ?

ನಡುವೇ ವ್ಯತ್ಯಾಸ. ವಸ್ತುನಿಷ್ಠನ ನಡು ನೆಟ್ಟಗಿರುತ್ತದೆ, ವ್ಯಕ್ತಿನಿಷ್ಠನದು ಬಾಗುತ್ತದೆ.

ಶಿವಮೊಗ್ಗ ರಮೇಶ್, ಮೈಸೂರು

ಪ್ರೇತ, ದೆವ್ವಗಳೆಲ್ಲವೂ ಹೆಚ್ಚಾಗಿ ಹೆಣ್ಣೇ ಆಗಿರಲು ಕಾರಣ?

ಬದುಕಿದ್ದಾಗ ಮುಕ್ತವಾಗಿ ಓಡಾಡಲು, ಹಾಡಲು ಅವಕಾಶ ಇಲ್ಲದಿರುವುದು ಹೆಣ್ಣಿಗೇ.

## ಬಹುಮಾನಿತ ಪ್ರಶ್ನೆ

ಹೇಮಾ ಗೋಪಾಲ, ಊರಿಲ್ಲ

ಅಡುಗೆ ಮಾಡಿ ಉಣ್ಣುವ ಬದಲು ದೇಹಕ್ಕೆ ಬೇಕಾದ ಸತ್ವಯುತ ಮಾತ್ರೆಗಳನ್ನೇ ತಿಂದುಕೊಂಡಿದ್ದರೆ ಹೇಗಿರುತ್ತೆ?

ನಾಲಿಗೆ ಒಪ್ಪದು. ಆರಡಿಯ ದೇಹ ಮೂರಿಂಚು ನಾಲಿಗೆಯ ದಾಸ.

ನಾಗೇಶ್ ಮೈಸೂರು. ಸಿಂಗಾಪುರ

ತಲೆಯಲ್ಲಿ ಸಗಣಿ ತುಂಬಿದೆ ಎಂದು ಬೈಯುವುದು ಸತ್ವಭರಿತ ಸಗಣಿಗೆ ಮಾಡಿದ ಅವಮಾನವಲ್ಲವೆ?

ಎಲ್ಲವೂ ಎಲ್ಲೆಡೆಯೂ ಸ್ತುತ್ಯವಲ್ಲ. ರಕ್ಕಸರಿಗೆ ಋಷಿ ಕಸ.

ಅರುಣ್ ಬಿ. ಕುಲಕರ್ಣಿ, ನರೇಗಲ್ಲ

ಎಲ್ಲ ಹೋಟೆಲ್‌ಗಳ ಅಡುಗೆಮನೆ ಬಾಗಿಲಿಗೆ 'ಪ್ರವೇಶ ನಿಷೇಧ' ಎಂಬ ಫಲಕವಿರುತ್ತದೆ. ಇಣುಕಿದರೆ ಏನಾಗುತ್ತೆ?

ಹೊಟ್ಟೆಯಲ್ಲಿರುವುದೂ ಹೊರಗೆ ಇಣುಕುವ ಸಾಧ್ಯತೆ ಉಂಟಾಗತ್ತೆ.

ಆರ್. ಮಧುಸೂದನ್, ಹಾಸನ

ನಾನು ವರಿಸಲಿರುವ ಹುಡುಗಿಯ ಹೆಸರು 'ಮೌನ'. ಲಗ್ನವಾದರೆ ನನಗೆ ಲಾಭವೋ, ನಷ್ಟವೋ?



ನಷ್ಟವೇ. ಮೌನೇನ ಕಲಹಂ ನಾಸ್ತಿ.

ಎಂ.ಎಸ್. ಸ್ವಾತಿ, ಗೌರಿಬಿದನೂರು

ಹೆಂಡತಿಯ ಕಾಟ ಹೆಚ್ಚಾದರೆ ಗಂಡ ಹೆಣ್ಣುದೇವರ ಮೊರೆ ಹೋಗಬೇಕೋ, ಗಂಡುದೇವರ ಮೊರೆ ಹೋಗಬೇಕೋ?

'ಅನ್ಯಥಾ ಶರಣಂ Nasty...' ಎನ್ನುತ್ತಾ ಸತೀದೇವಿಯ ಮೊರೆ ಹೋಗುವುದೇ ಸೂಕ್ತ.

ಸೂರ್ಯಪ್ರಕಾಶ, ಹಾಸನ

'ಹಿತಶತ್ರು' ಎನ್ನುತ್ತಾರಲ್ಲ, ಶತ್ರುವಿನಿಂದ ಹಿತವೆಲ್ಲಿಂದ?

ಸದಾ ಜಾಗರೂಕರಾಗಿರಲು ಸಹಾಯ ಮಾಡುವುದು ಅವರೇ.

**ರಾಮ್**

ಪ್ರಶ್ನೆ ಕಳುಹಿಸಲು: **editorsu@sudha.co.in**